**ಕರ್ನಾಟಕ ಸರ್ಕಾರ**

ಸಂ.ಡಿಟಿಇ/02/ಆರ್‌ಇಸಿ/2019-20

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ: 17-02-2020.

**-:: ಸುತ್ತೋಲೆ ::-**

**ವಿಷಯ:-** ಸಂಸ್ಥೆಯ ಖರ್ಚು-ವೆಚ್ಚ ಹಾಗೂ ಸ್ವೀಕೃತಿಯ ಮಾಹೆವಾರು ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಹಾಗೂ ನಿಗದಿತ ಅವಧಿಯೊಳಗೆ ಸಲ್ಲಿಸುವ ಬಗ್ಗೆ.

-00000000-

ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಇಲಾಖಾ ವೆಬ್-ಸೈಟ್‌ನಲ್ಲಿ ಸಂಸ್ಥೆಯ ಖರ್ಚು-ವೆಚ್ಚ ಹಾಗೂ ಸ್ವೀಕೃತಿಯ ಮಾಹೆವಾರು ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಹಾಗೂ ನಿಗದಿತ ಅವಧಿಯೊಳಗೆ **SOFT COPY** ಸಹಿತ ಸಲ್ಲಿಸಲು ಸೂಚಿಸಲಾಗಿರುತ್ತದೆ. ಆದಾಗ್ಯೂ ಹಲವಾರು ಸಂಸ್ಥೆಯವರು ನಿಗದಿತ ಅವಧಿ ಅಂದರೆ ಪ್ರತಿ ಮಾಹೆಯ 10ನೇ ತಾರೀಖಿನೊಳಗಾಗಿ ಮಾಹಿತಿಯನ್ನು ಕಳುಹಿಸಲು ಸ್ಥಳೀಯ ಖಜಾನೆಯಿಂದ 62 ಬಿ ವರದಿಯು ಸಂಸ್ಥೆಗಳಲ್ಲಿ ಸ್ವೀಕೃತವಾಗುವುದು ತಡವಾಗುತ್ತದೆ ಎಂಬ ಕಾರಣದಿಂದ ನಿರ್ದೇಶನಾಲಯಕ್ಕೆ ಆಯಾ ಮಾಹೆಯ ಖರ್ಚು ವೆಚ್ಚಗಳ ಮಾಹಿತಿಯನ್ನು ಸಲ್ಲಿಸಲು ವಿಳಂಬವಾಗುತ್ತಿರುವುದು ಕಂಡು ಬಂದಿರುತ್ತದೆ.

ಈ ನಡುವೆ ಸರ್ಕಾರದ ಆದೇಶದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸಂಸ್ಥೆಗಳ ಖರ್ಚು-ವೆಚ್ಚಗಳನ್ನು ಕಡ್ಡಾಯವಾಗಿ ಖಜಾನೆ-2 ಮಾದರಿಯಲ್ಲಿಯೆ ಮಾಡಲು ಸೂಚಿಸಲಾಗಿರುವುದರಿಂದ ಆಯಾ ಸಂಸ್ಥೆಯ ಖರ್ಚು-ವೆಚ್ಚಗಳಿಗೆ ಸಂಬಂಧಿಸಿದ **ಖಜಾನೆ ನಮೂನೆ 62-ಬಿ** ಸದರಿ ಸಂಸ್ಥೆಗಳಲ್ಲೆ ಲಭ್ಯವಾಗುತ್ತದೆ. ಆದ ಕಾರಣದಿಂದ ಇನ್ನು ಮುಂದೆ ಪ್ರತಿ ತಿಂಗಳ ಖರ್ಚು-ವೆಚ್ಚಗಳ ಅಂಕಿ-ಅಂಶಗಳನ್ನು ಆಯಾ ಸಂಸ್ಥೆಯಲ್ಲಿನ ಲೆಕ್ಕ-ಪತ್ರಗಳೊಂದಿಗೆ ತಾಳೆ ಮಾಡಿ ಹೊಂದಾಣಿಕೆಯಾದಲ್ಲಿ ನಿಗಧಿತ ಅವಧಿಯೊಳಗೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು. ತಾಳೆಯಾಗದಿದ್ದಲ್ಲಿ ಸಂಬಂಧಪಟ್ಟ ಸ್ಥಳೀಯ ಖಜಾನೆಯೊಂದಿಗೆ ಸಮನ್ವಯಿಸಿ ಅಂಕಿ ಅಂಶಗಳನ್ನು ತಾಳೆಮಾಡಿ, ಹೊಂದಾಣಿಸಿ ಸಂಸ್ಥೆಯ ಬಟವಾಡೆ ಅಧಿಕಾರಿಯವರಿಂದ ದೃಢೀಕರಿಸಿ ನಿರ್ದೇಶನಾಲಯಕ್ಕೆ ಯಾವುದೆ ವಿಳಂಬಕ್ಕೆ ಅವಕಾಶಕೊಡದೆ ಸಂಬಂಧಿಸಿದ ಸೂಕ್ತ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸುವುದು. ಇಲ್ಲವಾದಲ್ಲಿ ಮುಂದಿನ ಆಗು-ಹೋಗುಗಳಿಗೆ ಸಂಸ್ಥೆಯ ಪ್ರಾಂಶುಪಾಲರನ್ನೆ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಅದರಂತೆ, ಸದರಿ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯ **SOFT COPY** ಪ್ರತಿಯನ್ನು ಈ ಕೆಳಕಂಡ ಇ-ಮೇಲ್ ವಿಳಾಸ **dteaccrec@gmail.com** ಗೆ ಕಳುಹಿಸಲು ತಿಳಸಿದೆ.

18/02/2020

**ಲೆಕ್ಕಾಧಿಕಾರಿಗಳು(ಬಿಲ್ಸ್)**

**ಇವರಿಗೆ;**

ರಾಜ್ಯದ ಎಲ್ಲಾ ಸರ್ಕಾರಿ ಇಂಜನಿಯರಿಂಗ್/ಪಾಲಿಟೆಕ್ನಿಕ್ ಮತ್ತು ಕಿರಿಯ ತಾಂತ್ರಿಕ ಶಾಲೆಗಳ ಪ್ರಾಚಾರ್ಯರಿಗೆ - ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1. ಇ-ಆಡಳಿತ ವಿಭಾಗ, ತಾಂತ್ರಿಕ ನಿರ್ದೇಶನಾಲಯ, ಬೆಂಗಳೂರು (**ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು**)
2. ಕಛೇರಿ ಪ್ರತಿ.